ತಕ್ಷಣ ಆಜ್ಞೆ ಮಾಡುತ್ತೇನೆ, ಈ ವರ್ಷವೇ ಪ್ರಾರಂಭ ಮಾಡುವಂತೆ ಮಾಡುತ್ತೇನೆ.

ಶ್ರೀ ಕುಂದೂರು ರುದ್ರಪ್ಪ.—ತಮ್ಮ ರೇಟಿಗೂ ಅವರ ರೇಟಿಗೂ ವ್ಯತ್ಯಾಸವಿದ್ದರೆ ಹೇಗೆ ಮಾಡುವುದು ?

ಶ್ರೀ ವೀರೇಂದ್ರ ಪಾಟೀಲ್.— ರೇಟು ವ್ಯತ್ಯಾಸವಿದ್ದರೂ ಅವರ ರೇಟನ್ನೇ ಕೊಟ್ಟಿದ್ದೇನೆ, ಆದರೂ ಟೆಂಡರನ್ನೇ ಯಾರೂ ಹಾಕದಿದ್ದರೆ, ರೇಟಿನ ಪ್ರಶ್ನೆಯೇ ಬರುವುದಿಲ್ಲ.

ಶ್ರೀ ಟಿ. ಡಿ. ದೇವೆಂದ್ರಪ್ಪ.—ಇಂಥೊಂದೇ ಕೆಲಸಕ್ಕಲ್ಲ, ಅನೇಕ ಕೆಲಸಗಳಿಗೆ ಟೆಂಡರ್ ಕರೆದರೆ ಕಂಟ್ರಾಕ್ಟರುಗಳು ಬರುವುದಿಲ್ಲ, ಇದಕ್ಕೆ ಕಾರಣವೇನೆಂಬುದನ್ನು ಕಂಡು ಹಿಡಿದಿದ್ದೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈ ಕೆಲಸಕ್ಕೆ ಏಕೆ ಬರುವುದಿಲ್ಲವೆಂಬುದನ್ನು ಹೇಳಿದ್ದೇನೆ. Well foundation ಇರುವುದರಿಂದ, ಇದನ್ನು ಮಾಡಲು ಎಲ್ಲ ಕಂಟ್ರಾಕ್ಟರುಗಳಿಗೂ ಸಾಧ್ಯವಿಲ್ಲ. ದೊಡ್ಡ ಕಂಟ್ರಾಕ್ಟರುಗಳು ಈ ಸಣ್ಣ ಕೆಲಸಕ್ಕೆ ಬರುವುದಿಲ್ಲ. ಸಣ್ಣ ಕಂಟ್ರಾಕ್ಟರುಗಳ ಹತ್ತಿರ ಇದಕ್ಕೆ ಅಗತ್ಯವಾದ ಸಲಕರಣೆಗಳಿರುವುದಿಲ್ಲ. ಮಾನ್ಯ ಸದಸ್ಯರು ಯಾರನ್ನಾದರೂ ತಂದುಕೊಟ್ಟರೆ ತಕ್ಷಣ ಪ್ರಾರಂಭ ಮಾಡುತ್ತೇವೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.— ಒಂದು ಪಕ್ಷ ಬಾರದಿದ್ದರೆ ಸರ್ಕಾರದವರು ಏತಕ್ಕೆ ಕ್ರಮ ತೆಗೆದುಕೊಳ್ಳಬಾರದು ?

MR. SPEAER.—It is a suggestion for action.

Amount spent for the Construction of a Dam to Anekere Tank in Karkal Town of South Kanara District.

*Q.—295. Sri DAYANAND R. KALLE (Karkal).—

Will the Government be pleased to state.—

(*a*) the total amount spent by the Government for the contruction of a Dam to Anekere Tank in Karkala Town of Karkala Taluka of South Kanara District;

(*b*) the number of acres of land that was brought under cultivation due to construction of the Dam and the nature of the benefits derived by the surrounding ryots;

(*c*) whether they are aware that a claim of more than Rs. 30,000 has been made by the affected ryots towards compensation for the loss and damage sustained by them due to the construction of the Dam ?

A.—Sri ALUR HANUMANTHAPPA (Deputy MInister for Minor Irrigation).—

(*a*) Rs. 12,126.

(*b*) About 217.56 acres. The construction of the Dam has helped the ryots to grow second and third crops of Paddy.

(*c*) Yes.

ಶ್ರೀ ದಯಾನಂದ ಆರ್. ಕಳ್ಳೆ.—ದಕ್ಷಿಣ ನನ್ನಡ ಜಿಲ್ಲೆಯ ಕಾರ್ಕಳ ತಾಲ್ಲೂಕಿನಲ್ಲಿರುವ ಆನೆಕೆರೆಗೆ ಆಣೆಕಟ್ಟನ್ನು ಕಟ್ಟಿರುವುದರಿಂದ ಸುಮಾರು 217.56 ಎಕರೆ ಜಮೀನು ಸಾಗುವಳಿಯಾಗಿದೆ ಎಂದು ಹೇಳಿದ್ದೀರಿ, ಇದು ನಿಜಾಂಶಕ್ಕೆ ತದ್ವಿರುದ್ಧವಾಗಿದೆ ಎಂಬುದು ಗೊತ್ತಿದೆಯೇ ?

†ಶ್ರೀ ಆಲೂರು ಹನುಮಂತಪ್ಪ.—ಆದನ್ನು ಕಟ್ಟಿರುವುದರಿಂದ ಎರಡು ಮೂರು ಕ್ರಾಪಿಗೆ ಅನುಕೂಲವಾಗಿದೆ. We have increased the capacity of the dam.

ಶ್ರೀ ದಯಾನಂದ ಆರ್. ಕಳ್ಳೆ.—ಆ ಆಣೆಕಟ್ಟನ್ನು ಕಟ್ಟಿರುವುದರಿಂದ ಕೆರೆಯು ಮುಚ್ಚಿ ಹೋಗಿದೆ ಎಂಬುದು ಗೊತ್ತಾಗಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಆದನ್ನು ಕಟ್ಟಿರುವುದರಿಂದ ಕ್ರಾಪ್ ಜಾಸ್ತಿಯಾಗಿದೆ ಎಂದು ನನಗೆ ಇನ್‌ಫರ್‌ಮೇಷನ್ ಬಂದಿದೆ.

ಶ್ರೀ ದಯಾನಂದ ಆರ್. ಕಳ್ಳೆ.—ಮೊದಲು 12 ತಿಂಗಳೂ ನೀರು ಹರಿಯುತ್ತಿತ್ತು. ಈಗ ಆಣೆಕಟ್ಟನ್ನು ಕಟ್ಟಿರುವುದರಿಂದ ನೀರು ನಿಂತು ಹೋಗಿ ಅಲ್ಲಿಯ ಗದ್ದೆಗಳು ಬಂಜರಾಗಿರುವುದು ತಮಗೆ ಗೊತ್ತಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಅದು ನನಗೆ ಗೊತ್ತಿಲ್ಲ.

ಶ್ರೀ ಬಿ. ಭಾಸ್ಕರ ಶೆಟ್ಟಿ.— ಆ ಆಣೆಕಟ್ಟನ್ನು ಕಟ್ಟಿರುವುದರಿಂದ ತುಂಬಾ ಪ್ರಯೋಜನವಾಗಿದೆ ಎಂದು ಹೇಳಿದ್ದೀರಿ, ಆ ರೀತಿ ಆದ್ದರಿಂದ ಪ್ರಯೋಜನವಾಗಿದ್ದ ಪಕ್ಷದಲ್ಲಿ ಅಲ್ಲಿನ ರೈತರು 30 ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ ಏತಕ್ಕೆ ಕೇಳಬೇಕಾಗಿತ್ತು ?

ಶ್ರೀ ಆಲೂರು ಹನುಮಂತಪ್ಪ.—30 ಸಾವಿರ ರೂಪಾಯಿಗಳ ಕಾಂಪೆನ್‌ಸೇಷನ್ ಕೇಳಿರುವವರು ಜಮೀನು ಮುಳುಗಡೆಯಾಗಿರುವವರು. It is not yet decided.

ಶ್ರೀ ದಯಾನಂದ ಆರ್. ಕಳ್ಳೆ.—ಜಮೀನು ಮುಳುಗಡೆಯಾಗಿದೆಯೆಂದು ಅವರು ಕಾಂಪೆನ್‌ಸೇಷನ್ ಕೇಳುತ್ತಾ ಇಲ್ಲ. ಅಲ್ಲಿ ಆಣೆಕಟ್ಟಿರುವುದರಿಂದ ಕೆಲವು ರೈತರ ಜಮೀನಿಗೆ ನೀರು ಹೋಗದೆ ಸಾಗುವಳಿಗೆ

(ಶ್ರೀ ದಯಾನಂದ ಆರ್. ಕಳ್ಳಿ)

ತೊಂದರೆಯಾಗಿದೆ. ಆದಕ್ಕೋಸ್ಕರ ಆವರು ಕಾಂಪೆನ್ ಸೇಷನ್ ಕೇಳಿದ್ದಾರೆ.

ಶ್ರೀ ಆಲೂರು ಹನುಮಂತಪ್ಪ.—ಜಮೀನು ಸಬ್ ಮರ್ಜ್ ಆಗಿದೆ, ಡ್ಯಾಮೇಜಸ್ ಕಟ್ಟಿ ಕೊಡಿ, ಅಕ್ವಿಜಿಷನ್ ಅಮೌಂಟ್ ಕೊಡಿ ಎಂದು ಕೇಳುತ್ತಿದ್ದಾರೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಆ ಅಣೆಕಟ್ಟನ್ನು ಕಟ್ಟಿರುವುದರಿಂದ 217·56 ಎಕರೆ ಜಮೀನು ಭತ್ತದ ಸಾಗುವಳಿಯಾಗಿದೆ ಮತ್ತು ಎರಡು ಮೂರು ಬೆಳೆಗೆ ಅನುಕೂಲವಾಗುತ್ತದೆಯೆಂದು ಹೇಳಿದ್ದೀರಿ, ಆ ಅಣೆಕಟ್ಟನ್ನು ಕಟ್ಟುವುದಕ್ಕಿಂತ ಮುಂಚೆ ಎರಡು ಮೂರು ಬೆಳೆ ಆಗುತ್ತಾ ಇದ್ದಿತು, ಈಗ ಆಗುವುದಿಲ್ಲ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಆ ಅಣೆಕಟ್ಟನ್ನು ಕಟ್ಟಿರುವುದರಿಂದ ಎರಡು ಮೂರು ಬೆಳೆಗೆ ಅನುಕೂಲವಾಗುತ್ತದೆ ಎಂದು ನಮಗೆ ಇಂಫರ್ಮೇಷನ್ ಬಂದಿದೆ.

ಶ್ರೀ ಬಿ. ಭಾಸ್ಕರ ಶೆಟ್ಟಿ.—ಎರಡು ಮೂರು ಬೆಳೆಗೆ ಅನುಕೂಲವಾಗುವುದಿಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಅದು ನನ್ನ ಗಮನಕ್ಕೆ ಬಂದಿಲ್ಲ.

ಶ್ರೀ ದಯಾನಂದ್ ಆರ್. ಕಳ್ಳಿ.—ಆ ಕೆರೆಯಲ್ಲಿ ಸಿಲ್ಟ್ ತೆಗೆಯಬೇಕು. ಆಲ್ಲಿ ಅಣೆಕಟ್ಟನ್ನು ಕಟ್ಟುವುದಕ್ಕಾಗುವುದಿಲ್ಲ ಎಂದು ಆಲ್ಲಿಯ ಜನಗಳು ಹೇಳಿದ್ದಾರೆ ಅಲ್ಲವೇ?

Sri ALUR HANUMANTHAPPA.—We have raised the waste weir and therefore the capacity of the dam has been increased.

ಶ್ರೀ ದಯಾನಂದ ಆರ್. ಕಳ್ಳಿ.—ಆಲ್ಲಿ ಯಾವ ಜಮೀನೂ ಮುಳುಗಡೆಯಾಗಿರುವುದಿಲ್ಲ. ನೀರು ಇಲ್ಲದೆ ಕೆಲವು ಜಮೀನು ಬಂಜರು ಬಿದ್ದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

MR. SPEAKER.—What you know can be personally explained to the Hon'ble Minister. When he says he does not know you cannot try to instruct him on the floor of the House.

Sri SANJEEVANATH IKALA.—Will the Hon'ble Minister get himself corrected that because of the building of the dam, due to erosion of the soil, the entire area has been affected?

Sri ALUR HANUMANTHAPPA.—Having constructed the dam, we expect the raiyats to grow two or three crops. But it is said that two parties, one by name Mukunda Bhat and another by name Raghunatha Shetty whose lands are submerged are claiming compensation and acquisition amount.

Sri SANJEEVANATH IKALA.—How land could be submerged when the dam is built on the slopes of the Hills?

MR. SPEAKER.—That is too minor a detail.

Sri ALUR HANUMANTHAPPA.—Mukunda Bhat has agreed for compromise if he is paid Rs. 2,000 and permitted to remove the silt in the tank bed. What is it, if it is not submersion?

Sri SANJEEVANATH IKALA.—It is to remove the silt and put it into his field.

Sri ALUR HANUMANTHAPPA.—Tank bed silt has accumulated on his land. He wants permission to remove it.

ಶ್ರೀ ದಯಾನಂದ ಆರ್. ಕಳ್ಳಿ.—ಕೆರೆಯಲ್ಲಿ ಸಿಲ್ಟು ತುಂಬಿ ಕೆರೆಯು ಗದ್ದೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಶ್ರೀ ಆಲೂರು ಹನುಮಂತಪ್ಪ.—ಆಲ್ಲಿ ಈಗ 217·56 ಎಕರೆಗಳಲ್ಲಿ ಎರಡು ಬೆಳೆಗಳು ಆಗುತ್ತವೆ ಎಂದು ನಮಗೆ ಇಂಫರ್ಮೇಷನ್ ಬಂದಿದೆ.

ಶ್ರೀ ಬಿ.ಭಾಸ್ಕರ ಶೆಟ್ಟಿ.—ಆ ಅಣೆಕಟ್ಟಿನ ನಿರ್ಮಾಣದಿಂದ ಕೆಲವು ರೈತರಿಗೆ ತೊಂದರೆಯಾಗಿ ಆವರು ಈಗ 30 ಸಾವಿರ ರೂಪಾಯಿಗಳ ಪರಿಹಾರವನ್ನು ಕೇಳಿದ್ದಾರೆ. ಆವರ ಪೈಕಿ ಯಾವ ಯಾವ ರೈತರು ಪರಿಹಾರವನ್ನು ಕೇಳಿದ್ದಾರೆ?

Sri ALUR HANUMANTHAPPA.—Sri Mukunda Bhat and Sri Raghunatha Shetty have claimed Compensation. One Sri Mukunda Bhat has come to a compromise formula.